ಹಾಸ್ಟೆಲ್ ಕಟ್ಟಡಗಳ ನಿರ್ಮಾಣ.

3420(4424) ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕನಕಪುರ) :— ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿ ಇರುವ ಹಿಂದುಳಿದ ವರ್ಗಗಳ ಮತ್ತು ಪರಿಶಿಷ್ಟ ಜಾತಿ ವರ್ಗಗಳ ಮತ್ತು ಪರಿಶಿಷ್ಟ ಜಾತಿ ವರ್ಗಗಳ ಪೋಸ್ಟ್ ಮೆಟ್ರಿಕ್ ಹಾಗೂ ಪ್ರೀ-ಮೆಟ್ರಿಕ್ ಹಾಸ್ಟೆಲ್‌ಗಳ ಸಂಖ್ಯೆ ಎಷ್ಟು;

ಆ) ಇವುಗಳ ಪೈಕಿ ಸ್ವಂತ ಕಟ್ಟಡಗಳನ್ನು ಹೊಂದಿರುವ ಹಾಸ್ಟೆಲ್‌ಗಳ ಸಂಖ್ಯೆ ಎಷ್ಟು;

ಇ) ಸ್ವಂತ ಕಟ್ಟಡಗಳಿಲ್ಲದ ಹಾಸ್ಟೆಲ್‌ಗಳಿಗೆ ಕಟ್ಟಡಗಳನ್ನು ಕಟ್ಟಿಸಲು ಸರ್ಕಾರ ಹಮ್ಮಿಕೊಂಡಿರುವ ಯೋಜನೆಗಳು ಯಾವುವು?

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :—

ಅ) ಹಿಂದುಳಿದ ವರ್ಗಗಳು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗಾಗಿ ಸರ್ಕಾರವು ನಡೆಸುತ್ತಿರುವ ವಿದ್ಯಾರ್ಥಿನಿಲಯಗಳ ವಿವರ:

	ಮೆಟ್ರಿಕ್‌ಪೂರ್ವ	ಮೆಟ್ರಿಕ್‌ನಂತರ	ಒಟ್ಟು
ಹಿಂದುಳಿದ ವರ್ಗಗಳು	1132	208	1340
ಪರಿಶಿಷ್ಟ ಜಾತಿ	1064	239	1303
ಪರಿಶಿಷ್ಟ ವರ್ಗ	62	-	62

ಆ) ಸ್ವಂತ ಕಟ್ಟಡಗಳನ್ನು ಹೊಂದಿರುವ ವಿದ್ಯಾರ್ಥಿನಿಲಯಗಳ ವಿವರ:

	ಮೆಟ್ರಿಕ್‌ಪೂರ್ವ	ಮೆಟ್ರಿಕ್‌ನಂತರ	ಒಟ್ಟು
ಹಿಂದುಳಿದ ವರ್ಗಗಳು	581	50	631
ಪರಿಶಿಷ್ಟ ಜಾತಿ	801	61	862
ಪರಿಶಿಷ್ಟ ವರ್ಗ	27		27

ಇ) ಸ್ವಂತ ಕಟ್ಟಡಗಳನ್ನು ನಿರ್ಮಿಸಲು ಪ್ರತಿ ವರ್ಷವೂ ಆಯವ್ಯಯದಲ್ಲಿ ಅನುದಾನವನ್ನು ಅಳವಡಿಸಿಕೊಂಡು ಹಂತಹಂತವಾಗಿ ನಿರ್ಮಿಸಲಾಗುತ್ತಿದೆ.